

ಬೂಮ್ರಾ ಪುನರಾಗಮನದ ನಿರೀಕ್ಷೆ

# ವೇಗಾವೇಗ... ಭಾರತಕ್ಕೆಂದು ಪೂರ್ಣ 'ಯೋಗ'?

**ಭಾರತವು ವಿಶ್ವಕಪ್ ಟ್ವೆಂಟಿ20 ಪಂದ್ಯದಲ್ಲಿ ಉತ್ತಮ ಬೌಲಿಂಗ್ ಕಾಂಬಿನೇಷನ್‌ನೊಂದಿಗೆ ಕಣಕ್ಕೆ ಇಳಿಯಲು ಸಜ್ಜಾಗುತ್ತಿದೆ. ಈ ಕಾರಣಕ್ಕೇ ರಾಹುಲ್ ದ್ರಾವಿಡ್ ಬೌಲರ್‌ಗಳ ವಿಷಯದಲ್ಲಿ ಪ್ರಯೋಗಮುಖಿ ಆಗಿದ್ದಾರೆ.**

■ ವಿಶಾಖ ಎನ್.

ಶಹೀನ್ ಶಾ ಆಫ್ರಿದಿಯ ಬಲ ಮೊಣಕಾಲಿನಲ್ಲಿ ಯಮಯಾತನೆ ಕಾಣಿಸಿಕೊಂಡು ವಾರಗಳಾದ ಮೇಲೆ ಅವರನ್ನು ಇಂಗ್ಲೆಂಡ್‌ಗೆ ಚಿಕಿತ್ಸೆಗೆ ಕಳುಹಿಸಲು ಪಾಕಿಸ್ತಾನ ಕ್ರಿಕೆಟ್ ಮಂಡಳಿ ನಿರ್ಣಯ ಕೈಗೊಂಡಿತು. ಪಾಕಿಸ್ತಾನದ ಹಳೆಯ ಆಟಗಾರ ಮೊಹಮ್ಮದ್ ಹಫೀಸ್ ಇದನ್ನು 'ಕ್ರಿಮಿನಲ್ ನಡೆ' ಎಂದೇ ಟೀಕಿಸಿದರು. ಏಷ್ಯಾ ಕಪ್ ಕ್ರಿಕೆಟ್‌ನಲ್ಲಿ ಶಹೀನ್ ಆಡಲು ಆಗಲಿಲ್ಲ. ಹೀಗಾಗಿ ಅವರು ತಂಡದಿಂದ ಹೊರಬರಬೇಕಾಯಿತು. ಅವರ ಜಾಗದಲ್ಲಿ ಆಡಲು ಇಳಿದದ್ದು ನಸೀಮ್ ಷಾ.

ಶಹೀನ್ ಎಡಗೈ ವೇಗಿ. ಅನುಭವಸ್ಥ. ಅಪಾಯಕಾರಿ. ನಸೀಮ್ ಹೊಸಬ. ಉತ್ಸಾಹವಿದ್ದರೂ ಅನುಭವ ಸಾಲದು. ನಸೀಮ್ ಬಲಗೈ ವೇಗಿ. ಶಹೀನ್ ಅವರಂತೆಯೇ ನಸೀಮ್ ಕೂಡ ಪ್ರಭಾವಿ ಎನ್ನುವುದನ್ನು ಏಷ್ಯಾ ಕಪ್ ಮೊದಲ ಪಂದ್ಯದಲ್ಲಿ ಸಾಬೀತುಪಡಿಸಿದ್ದನ್ನು ಕಂಡೆವು. ಕೆ.ಎಲ್. ರಾಹುಲ್ ಅವರನ್ನು ಬೌಲ್ಡ್ ಮಾಡಿದ ಎಸೆತದ ಕರಾಮತ್ತು ಎಂಥದೆನ್ನುವುದು ಗೊತ್ತಿದೆ. ಆದರೆ, ನಸೀಮ್ ತಮ್ಮ ಕೊನೆಯ ಬೌಲರ್ ಮಾಡುವ ಹೊತ್ತಿಗೆ ಕುಂಟುತ್ತಿದ್ದರು. ಕಾಲನ್ನು ಎಳೆದೆಳೆದುಕೊಂಡೇ ಬೌಲ್ ಮಾಡಿದರು. ಬೆವರು ಬಸಿಯುವ ದುಬೈ ಹಾಗೂ ಶಾರ್ಜಾದಲ್ಲಿ ವೇಗದ ಬೌಲರ್‌ಗಳು ದೀರ್ಘ ಕಾಲ ಬಿಸಿಯುಸಿರು ಸೂಸುತ್ತಾ ಬೌಲ್ ಮಾಡುವುದು ಕಷ್ಟ. ನಾಲ್ಕು ವರ್ಷಗಳ ಹಿಂದೆ ಭಾರತದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಕೂಡ ಇದೇ ನೆಲದಲ್ಲಿ ದಣಿದು ಕುಸಿದಿದ್ದರು. ಸ್ಟ್ರೆಚರ್ ಮೇಲೆ ಅವರನ್ನು ಕರೆದುಕೊಂಡು ಸಾಗಬೇಕಾದ ಪರಿಸ್ಥಿತಿ ಸೃಷ್ಟಿಯಾಗಿತ್ತು. ಈಗ ಹಾರ್ದಿಕ್ ಫಿಟ್ ಆಗಿರುವುದು ಶುಭಸುದ್ದಿ. ಜಸ್‌ಪ್ರೀತ್ ಬೂಮ್ರಾ ಫಿಟ್ ಆಗಲು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ತರಬೇತಿಗೆ ಒಳಗಾಗುತ್ತಿರುವುದು ಅರೆ ಶುಭಸುದ್ದಿ.

ಭಾರತ ಏಷ್ಯಾ ಕಪ್ ಟ್ವೆಂಟಿ20 ಟೂರ್ನಿ ಮುಗಿದ ಮೇಲೆ ಆಸ್ಟ್ರೇಲಿಯಾಗೆ ಪ್ರವಾಸ ಹೋಗಲಿದೆ. ಆಮೇಲೆ ದಕ್ಷಿಣ ಆಫ್ರಿಕಾ ತಂಡ ಭಾರತಕ್ಕೆ ಬರಲಿದೆ. ಅದಾದ ನಂತರ ಆಸ್ಟ್ರೇಲಿಯಾ ನೆಲದಲ್ಲಿಯೇ ಟ್ವೆಂಟಿ20 ವಿಶ್ವಕಪ್ ಪ್ರಾರಂಭ. ಭಾರತ ತನ್ನ ಬೌಲರ್‌ಗಳ ವಿಷಯದಲ್ಲಿ ಪಾಕಿಸ್ತಾನಕ್ಕೆ ಆದಂಥ ಪರಿಸ್ಥಿತಿಯನ್ನು ತಂದುಕೊಳ್ಳದೆ ಇರಲೆಂದೇ ಈಗಿನಿಂದಲೇ ಕೆಲವು ಪ್ರಯೋಗಗಳಿಗೆ ಮುಂದಾಗಿದೆ. ದುಬೈನ ಸೆಕೆ ಸುರಿಯುವ ನೆಲದಲ್ಲಿ ಅರ್ಶದೀಪ್ ಸಿಂಗ್, ಅವೇಶ್ ಖಾನ್ ತರಹದ ಬಿಸಿರಕ್ತದ ಹುಡುಗರನ್ನು ಪರೀಕ್ಷೆಗೆಂದು ಇಳಿಸಿದೆ. ಅರ್ಶದೀಪ್ ತಣ್ಣಗಿನ ಧೋರಣೆ ಹಾಗೂ ಎಸೆತಗಳ ವೇಗದಲ್ಲಿ ಮಾಡುವ ಮಾರ್ಪಾಡು ಎದುರಾಳಿಗಳಿಗೆ ಹಲವು ಪ್ರಶ್ನೆಗಳನ್ನು ಒಡ್ಡಬಹುದೆನ್ನುವುದು ಲೆಕ್ಕಾಚಾರ. ಮೇಲಾಗಿ ಅವರು ಎಡಗೈ ಮಧ್ಯಮ ವೇಗದ ಬೌಲರ್. ಭಾರತ ದೀರ್ಘ ಕಾಲದಿಂದ ಇಂತಹ ಒಬ್ಬ ಬೌಲರ್‌ಗಾಗಿ ಹುಡುಕಾಟ ನಡೆಸುತ್ತಲೇ ಬಂದಿದೆ.

ಚುಟುಕು ಕ್ರಿಕೆಟ್‌ನ ಜಾಯಮಾನಕ್ಕೆ ತಕ್ಕಂತೆ ಬೌಲಿಂಗ್ ಮಾಡಬಲ್ಲ ಭಾರತದ ಸ್ಟ್ರೈಕ್ ಬೌಲರ್ ಸದ್ಯಕ್ಕೆ ಭುವನೇಶ್ವರ್ ಕುಮಾರ್. ಬೂಮ್ರಾ ಅವರಿಗಿಂತಲೂ ಭುವಿ ಅಪಾಯಕಾರಿ ಎನ್ನುವುದು ಬೇರೆ ತಂಡಗಳ ತರಬೇತುದಾರರ ಅಂಬೋಣ. ತಮ್ಮ ಸ್ವಿಂಗ್ ಮೇಲಿನ ನಿಯಂತ್ರಣ ಹಾಗೂ ಹೊಸ ಮತ್ತು ಹಳೆಯ ಬಿಳಿ ಚೆಂಡನ್ನು ಬಳಸಿಕೊಳ್ಳುವುದಲ್ಲಿನ ಜಾಣ್ಮೆ ಭುವಿಯನ್ನು ಈ



ಭುವಿ, ಉಮೇಶ್, ಹಾರ್ದಿಕ್, ಶಮಿ– ಸಾಂಘಿಕ ಬೌಲಿಂಗ್ ಪಡೆ